ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಸಿ.ಸಿ. ನಂ.**1739/2016.**
ದಿನಾಂಕಃ**20-12-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಹೆಚ್. ಮಂಜುನಾಥ | ಚಾಸಾ-8 ಪ್ರಾಸಾ-58 |
| ತಂದೆಯ ಹೆಸರು | ಲೇಟ್ ಹನುಮಂತಪ್ಪ | |
| ವಯಸ್ಸು | 53 ವರ್ಷ | |
| ಉದ್ಯೋಗ | ಎ ಎಸ್ ಐ ತರೀಕೆರೆ ಪೊಲೀಸ್ ಠಾಣೆ | |
| ವಾಸ | ತರೀಕೆರೆ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2014 ರಿಂದ 2018 ರವರೆಗೆ ಕಡೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 10.05.2016 ರಂದು ನಾನು ಪೊಲೀಸ್ ಠಾಣಾ ಪ್ರಭಾರದಲ್ಲಿ ಇದ್ದಾಗ ಬೆಳಗ್ಗೆ 10.30 ಗಂಟೆಗೆ ಚಾಸಾ 1 ರವರು ಹಾಜರುಪಡಿಸಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ.167/2016 ರಂತೆ ಪ್ರಕರಣ ದಾಖಲಿಸಿರುತ್ತೇನೆ ಹಾಗೂ ಪ್ರ.ವ.ವರದಿಯನ್ನು ಮೇಲಾಧಿಕಾರಿಯವರಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ನಿಪಿ 2 ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು ಹಾಗೂ ಸದರಿ ಪ್ರ.ವ.ವರದಿಯನ್ನು ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ-9 ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀಸವಾಲುಃ ಆರೋಪಿತರ ಪರ ಶ್ರೀ. ಪಿ ಆರ್ ಸಿ ವಕೀಲರಿಂದ:-

ದಿಃ10.05.2016 ರಂದು ಪ್ರ.ವ.ದಾಖಲಾಗಿರುತ್ತದೆ. ನಿಪಿ6 ರಲ್ಲಿ ಕೃತ್ಯ ನಡೆದ ದಿನಾಂಕ 08.05.2016 ಎಂದು ನಮೂದು ಇದೆ ಎಂದರೆ ಸರಿ. ಸಾಮಾನ್ಯವಾಗಿ ಗಾಯಾಳು/ನೊಂದ ವ್ಯಕ್ತಿಯು ಚಿಕಿತ್ಸೆ ಪಡೆದ ನಂತರ ನಾವು ಪ್ರ.ವ.ವರದಿ ದಾಖಲು ಮಾಡುತ್ತೇವೆ. ಸಾಮಾನ್ಯವಾಗಿ ಯಾವ ದಿನಾಂಕ ಘಟನೆಯಾಗಿರುತ್ತದೆ ಅದೇ ದಿನ ಚಿಕಿತ್ಸೆ

ಪಡೆದುಕೊಳ್ಳುತ್ತಾರೆ ಎಂದರೆ ಸರಿ. ದಿಃ09.05.2016 ರಂದು ಚಿಕಿತ್ಸೆ ಪಡೆದುಕೊಂಡಿದ್ದು, ದಿನಾಂಕ 08.05.2016 ರಂದೇ ಗಲಾಟೆಯಾಗಿದೆ ಎಂದು ಸುಳ್ಳು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಘಟನೆಯಾದ 24 ಗಂಟೆಯಲ್ಲಿ ಪ್ರ.ವ.ವರದಿ ದಾಖಲಾಗಬೇಕು ಎಂದರೆ ಸರಿಯಲ್ಲ. ಚಾಸಾ 4 ನಂಜುಂಡಪ್ಪ ಬಿನ್ ವೀರಭದ್ರಪ್ಪ ರವರು ನಮ್ಮ ಠಾಣಾ ಸಿಬ್ಬದಿಯಾಗಿದ್ದು ಅವರು ಚಾಸಾ 1 ರವರ ಸಂಬಂಧಿ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಅವರ ಸಂಬಂಧಿಕರಾದ ಕಾರಣ ಅವರ ಮಾತು ಕೇಳಿ ನಾನು ಆರೋಪಿತರು ದಾಖಲಿಸಿದ್ದ ಕೇಸಿಗೆ ಕೌಂಟರ್ ಕೇಸ್ ಆಗಿ ಆರೋಪಿತರ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 4 ರವರೊಂದಿಗೆ ಷರಿಕ್ಕಾಗಿ ಘಟನೆ ನಡೆಯದೇ ಇದ್ದರು ಸಹಃ ಸುಳ್ಳು ಮಾಹಿತಿಯ ಆಧಾರದ ಮೇಲೆ ಸುಳ್ಳು ಪ್ರ.ವ.ವರದಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಕೇಸು ದಾಖಲಾಗುವ ಪೂರ್ವದಲ್ಲಿ ವೈದ್ಯಕೀಯ ದಾಖಲೆ ಪರಿಶೀಲನೆ ಮಾಡಿ ನಂತರ ಪ್ರ.ವ.ವರದಿ ದಾಖಲು ಮಾಡುವ ಕ್ರಮ ಇದೆ ಎಂದರೆ ಸರಿಯಲ್ಲ. ಪ್ರ.ವ.ವರದಿ ದಾಖಲು ಮಾಡಿದ 2 ವಾರಗಳ ನಂತರ ನಾನು ವೈದ್ಯಕೀಯ ವರದಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವನ್ನು ವೈದ್ಯರು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು